(SRI T. SIDDALINGAIYA.)

(*i*) Yes.

(*j*) Local factories are able to produce oil to meet the American demand; but the sandalwood oil imported to America is subject to a duty of 10 per cent on the value of the oil, while sandalwood is allowed to be imported without such duty. Hence distilling the oil in U.S.A., enables production at more competitive prices.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿಯವರು.—ಅಮೇರಿಕಾದಲ್ಲಿ ಗಂಧದ ಎಣ್ಣೆ ತೆಗೆಯುತ್ತಾರಲ್ಲಾ ಅಲ್ಲಿ ಎಷ್ಟು ತೆಗೆದರು, ಎಷ್ಟು ಎಣ್ಣೆ ಬಂತು ಎಂದು ನೋಡ ತಕ್ಕವರು ಯಾರು?

ಶ್ರೀ ಟಿ. ಸಿದ್ದಲಿಂಗಯ್ಯನವರು.... ನೋಡಿಕೊಳ್ಳತಕ್ಕ ವರೊಬ್ಬರು ಅಲ್ಲಿದ್ದಾರೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿಯವರು.—ಗಂಧದ ಎಣ್ಣೆಯನ್ನು ಅಲ್ಲಿ ವ್ಯಾಪಾರಮಾಡುವ ಬೆಲೆಯೇನು?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನೋಟೀಸ್ ಬೇಕು.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿಯವರು.—ಗಂಧದ ಮರವನ್ನು ನಾವು ಅಲ್ಲಿಗೆ ಕಳುಹಿಸಿ ಅಲ್ಲಿ ಎಣ್ಣೆ ತೆಗೆಯುವ ಖರ್ಚಿಗೂ ಎಣ್ಣೆಯನ್ನು ಇಲ್ಲಿಂದ ಕಳುಹಿಸುವ ಖರ್ಚಿಗೂ ವ್ಯತ್ಯಾಸವೇನು?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಇಲ್ಲಿಗಿಂತಲೂ ಅಲ್ಲಿ ತಯಾರಿಸುವುದು ಕಡಮೆ ಖರ್ಚಿನವಾಗುತ್ತದೆ. ನಿರ್ದಿಷ್ಟವಾಗಿ ಇಷ್ಟೆ ವ್ಯತ್ಯಾಸವಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿಯವರು.—ನಮ್ಮ ಫ್ಯಾಕ್ಟರಿಯಲ್ಲೇ ಎಣ್ಣೆ ತೆಗೆಯಬಹುದಾದ ಅವಕಾಶವಿದೆ ಯೆಂದು ಹೇಳಿದಮೇರೆ ಹೊರದೇಶಕ್ಕೆ ಗಂಧವನ್ನು ಕಳುಹಿಸಿ ಅಲ್ಲಿ ಎಣ್ಣೆ ತೆಗೆಯುವುದಕ್ಕಿಂತ ಇಲ್ಲಿಯೇ ಎಣ್ಣೆ ತೆಗೆದು ಅಲ್ಲಿಗೆ ಕಳುಹಿಸಿದರೆ ಹೆಚ್ಚು ಲಾಭ ಬರುವುದಿಲ್ಲವೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ವ್ಯಾಪಾರದ ದೃಷ್ಟಿಯಿಂದ ಲಾಭ ಬರುವುದಿಲ್ಲ. ಏಕೆಂದರೆ ಗಂಧದ ಮರವನ್ನು ಕಳುಹಿಸುವುದಕ್ಕೆ ಡ್ಯೂಟಿ ಕೊಡಬೇಕಾಗಿ ಇಲ್ಲ. ಗಂಧದ ಎಣ್ಣೆ ಕಳುಹಿಸಬೇಕಾದರೆ ಡ್ಯೂಟಿ ಕೊಡಬೇಕಾಗುತ್ತದೆ. ಆದ್ದರಿಂದ ಅಲ್ಲಿನ ವ್ಯಾಪಾರದ ಬೆಲೆಯನ್ನು ನೋಡಿಕೊಂಡರೆ, ಮರವನ್ನು ಕಳುಹಿಸುವುದೇ ಉತ್ತಮ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿಯವರು.—ಒಂದು ಟನ್ ಗಂಧದ ಮರಕ್ಕೆ 128 ಪೌಂಡು ಎಣ್ಣೆ ಬರುತ್ತದೆಂದು ಹೇಳಿದ್ದೀರಿ. ಒಂದು ಟನ್ ನಷ್ಟು ತೂಕದ ಮರ ಕಳುಹಿಸುವುದಕ್ಕೆ ಬದಲು 128 ಪೌಂಡು ಎಣ್ಣೆ ಕಳುಹಿಸುವುದಕ್ಕೆ ಖರ್ಚು ಕಡಮೆಯಿಲ್ಲವೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದನ್ನೆಲ್ಲಾ ಲೆಕ್ಕ ಹಾಕಿಕೊಂಡರೂ ಮರವನ್ನು ಕಳುಹಿಸುವುದೇ cheaper ಆಗುತ್ತದೆ.

Sri G. A. THIMMAPPA GOWDA (Arkalgud).—May I know the quantity of the sandal oil produced and exported for the last three years?

Sri T. SIDDALINGAIYA.—The information is not readily available, Sir.

Visvesvaraya Village Industries Development Committees.

Q.—439. Sri D. M. GOVINDARAJU (Nelamangala).—

Will the Government be pleased to state:—

(*a*) the districts where the Visvesvaraya Village Industries Development Committees have been started now (Talukwar information to be given);

(*b*) whether it is a fact that a V.G.D. Inspector is appointed in every hobli;

(*c*) whether it has come to their notice that no work is being turned out by the V.G.D. Inspectors?

A.—Sri T. SIDDALINGAIYA (Minister for Industries).—

(*a*) Bangalore and Kolar.—

BANGALORE DISTRICT.

(1) Bangalore North.
(2) Bangalore South.
(3) Anekal.
(4) Kanakapura.
(5) Magadi.
(6) Hosakote.
(7) Doddaballapur.
(8) Ramanagaram.
(9) Chennapatna.
(10) Devanahalli.
(11) Nelamangala.

KOLAR DISTRICT

(1) Kolar.
(2) Mulbagal.
(3) Bangarpet.
(4) Malur.
(5) Sreenivasapur.
(6) Chintamani.
(7) Siddlaghatta.
(8) Chikballapur.
(9) Goribidnur.
(10) Bagepalli
(11) Gudibanda.

(*b*) Yes.

(*c*) No.

ಶ್ರೀ ಡಿ. ಎಂ. ಗೋವಿಂದರಾಜುರವರು.—ವಿಶ್ವೇಶ್ವರಯ್ಯ ಗ್ಯಾಪಾಭಿವೃದ್ಧಿ ಯೋಜನೆ ಪುರುವಾಗಿ ಎಷ್ಟು ವರ್ಷವಾಯಿತು ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಎರಡು ವರ್ಷ ಆಯಿತು.

ಶ್ರೀ ಡಿ. ಎಂ. ಗೋವಿಂದರಾಜುರವರು.—ಹೋಬಳಿಗಳಿಗೆ V.G.D. ಇನ್‌ಸ್ಪೆಕ್ಟರುಗಳನ್ನು ನೇಮಿಸಿದ್ದೀರಲ್ಲಾ, ಎಷ್ಟು ಹೋಬಳಿಗಳಿಗೆ ಒಬ್ಬರಂತೆ ನೇಮಿಸಿದ್ದೀರಿ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಉತ್ತರದಲ್ಲೇ ಕೊಟ್ಟಿದೆ.

ಶ್ರೀ ಡಿ. ಎಂ. ಗೋವಿಂದರಾಜುರವರು.—ಈ ವಿ. ಜಿ. ಡಿ. ಇನ್ಸ್‌ಪೆಕ್ಟರುಗಳಿಗೆ ಟ್ರೈನಿಂಗ್ ಏನಾದರೂ ಕೊಟ್ಟಿದೆಯೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅವರು ಕೆಲಸ ಮಾಡುವ ಹಾಗೆಯೇ ಟ್ರೈನಿಂಗ್‌ನ್ನು ತಗೆದುಕೊಳ್ಳುತ್ತಾರೆ.

ಶ್ರೀ ಡಿ. ಎಂ. ಗೋವಿಂದರಾಜುರವರು.—ವಿ.ಜಿ.ಡಿ. ಫಂಡನ್ನು ಜನರಿಂದ ಕಡ್ಡಾಯವಾಗಿ ವಸೂಲುಮಾಡುತ್ತಿರುವುದು ನಿಜವೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನುಳ್ಳು.

Sri R. ANANTHARAMAN (Chamarajapet).—How much money have the Government spent over this scheme for the last two years ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಸುಮಾರು 9 ಲಕ್ಷ ರೂಪಾಯಿಗಳು ಖರ್ಚಾಗಿವೆ.

Sri R. ANANTHARAMAN.—Is that scheme successful ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದು ಅಭಿಪ್ರಾಯದ ವಿಷಯ.

ಶ್ರೀ ಎಸ್. ಸಿದ್ದಪ್ಪನವರು (ಮಾಗಡಿ).—ಈ ಯೋಜನೆಯನ್ನು ಇನ್ನೂ ಎಷ್ಟು ದಿವಸ ನಡೆಸಬೇಕೆಂದು ಸರ್ಕಾರದವರ ಅಭಿಪ್ರಾಯ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನಡೆಸುವಷ್ಟು ದಿವಸವೂ ಇರಬೇಕೆಂದಿದೆ.

ಶ್ರೀ ಎಸ್. ಸಿದ್ದಪ್ಪನವರು.—ಇದರಿಂದ ಪ್ರಜೆಗಳಿಗೇನಾದರೂ ಲಾಭವಿದೆಯೆಂದು ಸರ್ಕಾರದವರು ಮನಗಂಡಿದ್ದಾರೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಲಾಭದ ದೃಷ್ಟಿಯಿಂದ ಇದನ್ನು ಕೈಕೊಂಡಿಲ್ಲ. ಜನಗಳಲ್ಲಿ ಕೈಗಾರಿಕಾ ದೃಷ್ಟಿ ಬೆಳೆಯಲಿ, ಅದಕ್ಕೆ ಪ್ರೋತ್ಸಾಹ ಹೆಚ್ಚಲಿ ಎಂದು ಈ Industrialisation schemeನ್ನು ಸರ್ಕಾರದವರು ಕೈಕೊಂಡಿದ್ದಾರೆ.

ಶ್ರೀ ಬಿ. ಮಾಧವಾಚಾರ್‌ರವರು (ಭದ್ರಾವತಿ).—ಈ ಯೋಜನೆಯನ್ನು ಇನ್ನೂ ಬೇರೆ ಕಡೆಗೆ ವಿಸ್ತರಿಸಲೇಕೆಂಬ ಯೋಚನೆಯಿದೆಯೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಯೋಚನೆಯಲ್ಲಿದೆ.

ಶ್ರೀ ಬಿ. ಮಾಧವಾಚಾರ್‌ರವರು.—ನಮ್ಮ ನರಸಿಂಹರಾಜಪುರ ಮುಂತಾದ ಮಲೆನಾಡು ತಾಲ್ಲೂಕುಗಳಲ್ಲಿ ಇದನ್ನು ಜಾರಿಗೆ ತರುವುದನ್ನು ಗಮನದಲ್ಲಿಡುತ್ತೀರಾ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಆಗಬಹುದು.

Report of Dr. C. R. Reddy on Educational reforms.

Q.—116. Sri S. SRINIVASA IYENGAR (T.—Narasipur).—

Will the Government be pleased to state :—

(*a*) whether they had appointed some years back, late Dr. C. R. Reddy to suggest educational reforms ;

(*b*) whether he has given a report in this respect ;

(*c*) the expenditure incurred by them in this connection ;

(*d*) how this report was disposed of ;

(*e*) whether they are contemplating to introduce before the Assembly a revised University Bill ;

(*f*) whether they now have thought of inviting Dr. Ratnaswamy to suggest educational reforms ?

A.—Sri A. G. RAMACHANDRA RAO (Minister for Law and Education).—

(*a*) Yes.

(*b*) Yes.

(*c*) Rs. 19,290-4-0.

(*d*) The report is under consideration of Government.

(*e*) The matter is under consideration.

(*f*) The representatives of the Press suggested this name for the consideration of Government.

Sri S. SRINIVASA IYENGAR.—When was Dr. C. R. Reddy appointed ?

Sri A. G. RAMACHANDRA RAO.—Some years ago.

Sri S. SRINIVASA IYENGAR.—I wanted to know when he was invited to Mysore State to suggest these reforms ?

Sri A. G. RAMACHANDRA RAO.—Sir, the Hon'ble Member knows it. I cannot give the exact date just at present.